*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್ ಘಟಕ, ಬೆಂಗಳೂರು*

***(58ನೇ ನಗರ ಸಿವಿಲ್ ನ್ಯಾಯಾಂಗಣ)***

*ದಿನಾಂಕಃ 26ನೇ ಮಾಹೆ ಜೂನ್, 2020*

*-ಃ ಉಪಸ್ಥಿತರು ಃ-*

*ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್‌ಎಲ್.ಎಂ.,*

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*

*ಮೆಯೋಹಾಲ್ ಘಟಕ, ಬೆಂಗಳೂರು*

***ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ 25262/2020***

ಅರ್ಜಿದಾರ/ಃ ಸತ್ಯಪ್ರಸಾದ್ ವೆಂಕಟರಂಗ ನುನಿ,
(ಆರೋಪಿತ) ಬಿನ್ಃ ರಾಧಕೃಷ್ಣಮೂರ್ತಿ, ಸುಮಾರು 41 ವರ್ಷ,
ವಾಸಃ ನಂ.ಬಿ-403, ಫ್ರೆಶ್ ಲಿವಿಂಗ್ ಅಪಾರ್ಟ್‌ಮೆಂಟ್,
ಮಾದಪುರ ಅಂಚೆ, ಹೈದ್ರಾಬಾದ್, ತೆಲಂಗಾಣ ರಾಜ್ಯ.

(ಪರವಾಗಿ ಶ್ರೀ ಎಂ. ದೇವರಾಜ, ವಕೀಲರು)

- ವಿರುದ್ಧ -

ಎದುರುದಾರರುಃ ರಾಜ್ಯದ ಪರವಾಗಿ ಹೆಣ್ಣೂರು ಪೊಲೀಸ್ ಠಾಣೆ,
ಬೆಂಗಳೂರು ನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

**ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ**

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರ/ಆರೋಪಿತ ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಸಲ್ಲಿಸಿ, ಬೆಂಗಳೂರು ಮೆಯೋ ಹಾಲ್

ಘಟಕದ 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದಲ್ಲಿ ತನ್ನ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯ ಕ್ರೈಮ್ ನಂ.209/2019ರಲ್ಲಿ ಭಾರತ ದಂಡ ಸಂಹಿತೆ ಕಲಂ 326, 307 ಸಹವಾಚಕ ಕಲಂ 34ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಯಮಿತ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾನೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ಅರ್ಜಿದಾರ/ಆರೋಪಿತ ತಾನು ಅಮಾಯಕನಿದ್ದು, ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ಪೊಲೀಸರು ತನ್ನನ್ನು ಈ ರೀತಿಯ ಸುಳ್ಳು ಪ್ರಕರಣದಲ್ಲಿ ಸಿಲುಕಿಸಿದ್ದಾರೆಂದೂ, ತನ್ನ ವಿರುದ್ಧ ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿರುತ್ತವೆ ಎಂದೂ, ತಾನು ಯಾವುದೇ ಅಪರಾಧಿಕ ಹಿನ್ನೆಲೆ ಇರುವಂತಹ ವ್ಯಕ್ತಿಯಾಗಿರುವುದಿಲ್ಲವೆಂದೂ, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಹೊಂದಿದ್ದು, ಕುಟುಂಬ ನಿರ್ವಹಣೆಯ ಜವಾಬ್ದಾರಿ ತನ್ನ ಮೇಲೆ ಇರುವುದಾಗಿಯೂ, ತಾನು 'Intraductal Palpllary Mucinous Neoplasia of Pancreas Non-invasive' ಖಾಯಿಲೆಯಿಂದ ಬಳಲುತ್ತಿದ್ದು, ತನಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಅವಶ್ಯಕತೆ ಇದೆ ಎಂದೂ, ಹೈದ್ರಾಬಾದ್ ನಗರದ ಖಾಯಂ ನಿವಾಸಿಯಾದ ತಾನು ತಲೆಮರೆಸಿಕೊಳ್ಳುವ ಅಥವಾ ವಿಚಾರಣೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುವುದಿಲ್ಲವೆಂದೂ, ಆರೋಪಿಸಿದಂತಹ ಅಪರಾಧವು ಕಡ್ಡಾಯವಾಗಿ ಮರಣದಂಡನೆ ಶಿಕ್ಷೆ ವಿಧಿಸುವಂತಹ ಅಪರಾಧವಲ್ಲವೆಂದೂ, ತನಗೆ ನಿಯಮಿತ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದೂ, ನ್ಯಾಯಾಲಯ ವಿಧಿಸುವ ಎಲ್ಲಾ

ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ತಾನು ಸಿದ್ದನಿದ್ದೇನೆಂದು ಹೇಳಿ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾನೆ.

3. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಪಿರ್ಯಾದುದಾರರು ನೀಡಿದ ದೂರಿನ ಆಧಾರದ ಮೇಲಿಂದ ಹೆಣ್ಣೂರು ಪೋಲಿಸರು ಭಾ.ದಂ.ಸಂ. ಕಲಂ 326 ಸಹವಾಚಕ 34 ರಡಿಯಲ್ಲಿ ಆರೋಪಿಗಳ ವಿರುದ್ದ ಪ್ರಕರಣವನ್ನು ತಮ್ಮ ಠಾಣಾ ಮೊ.ಸಂ. 209/2019 ರಡಿಯಲ್ಲಿ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ದಿಃ03-02-2020ರಂದು ಈ ಪ್ರಕರಣದ ಗಾಯಾಳುವಿನ ಸಹೋದರ ನೀಡಿದ ದೂರಿನ ಮೇರೆಗೆ ಕ್ರೈಮ್ ನಂಃ41/2020ರಲ್ಲಿ ಮಹದೇವಪುರ ಪೊಲೀಸ್ ಠಾಣೆಯಲ್ಲಿ ಪಿರ್ಯಾದಿದಾರನ ಮೇಲೆ ನಡೆದ ಕೊಲೆ ಯತ್ನ ಸಂಬಂಧ ಭಾ.ದಂ.ಸಂ. ಕಲಂಃ307ರಡಿಯಲ್ಲಿ ಪ್ರಕರಣ ದಾಖಲಾಗಿದ್ದು ಮಾರನೇ ದಿನ ಪ್ರಕರಣದ ಪಿರ್ಯಾದಿ ಮೃತಪಟ್ಟಿದ್ದು, ಆರೋಪಿತರಾದ ಪ್ರಶಾಂತ, ಪ್ರೇಮ ಮತ್ತು ಇತರರ ವಿರುದ್ಧ ಭಾ.ದಂ.ಸಂ. ಕಲಂಃ302ನ್ನು ಸೇರ್ಪಡೆ ಮಾಡಲಾಗಿರುತ್ತದೆ.

ಮಹದೇವಪುರ ಪೊಲೀಸ್ ಠಾಣೆ ಮೊ.ಸಂಃ41/2020ರಲ್ಲಿ ಬಂಧಿಸಿದ ಆರೋಪಿತರ ಹೇಳಿಕೆಯ ಮೇರೆಗೆ ಮೇಲ್ಕಂಡ ಅರ್ಜಿದಾರ/ಆರೋಪಿತನ ವಿರುದ್ಧ ಮೇಲ್ನೋಟಕ್ಕೆ ಆರೋಪಗಳು ದೃಡಪಟ್ಟಿದ್ದು, ಈ ಕಾರಣದಿಂದ ಆತನನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಮಾಡಿ ಭಾ.ದಂ.ಸಂ. ಕಲಂಃ307 ಹೆಚ್ಚುವರಿಯಾಗಿ ಸೇರ್ಪಡೆ ಮಾಡಲಾಗಿರುತ್ತದೆ. ಅರ್ಜಿದಾರ/ಆರೋಪಿತನ ವಿರುದ್ಧ ಪ್ರಬಲವಾದ ಸಾಕ್ಷ್ಯಗಳು ಲಭ್ಯವಿದ್ದು, ಪ್ರಕರಣವು ಇನ್ನೂ ತನಿಖಾ ಹಂತದಲ್ಲಿರುತ್ತದೆ. ಹೀಗಾಗಿ ಆತನನ್ನು ನಿಯಮಿತ ಜಾಮೀನಿನ ಮೇಲೆ ಬಿಟ್ಟಲ್ಲಿ ಪುನಃ ಇದೇ ರೀತಿಯ

ಗುನ್ಹೆಗಳನ್ನು ಮಾಡುವ ಸಾದ್ಯತೆಯಿದೆ ಎಂದೂ, ಸಾಕ್ಷಿಗಳನ್ನು ಹೆದರಿಸಿ, ಬೆದರಿಸಿ ಸಾಕ್ಷ್ಯ ನುಡಿಯದಂತೆ ಮಾಡುವ ಹಾಗೂ ಸಾಕ್ಷ್ಯಧಾರಗಳನ್ನು ನಾಶಪಡಿಸುವ ಸಾಧ್ಯತೆಗಳಿದ್ದು, ತನಿಖೆ ಕುಂಠಿತವಾಗುವ ಸಾಧ್ಯತೆಗಳಿವೆ ಎಂದೂ, ಹೀಗಾಗಿ ಆತನು ನಿಯಮಿತ ಜಾಮೀನಿಗೆ ಅರ್ಹನಲ್ಲ ಎಂದು ಹೇಳಿ, ಆತನ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದ ವಿವಾದವನ್ನು ಆಲಿಸಲಾಯಿತು.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇಃ-

1) ಅರ್ಜಿದಾರ/ಆರೋಪಿತ ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ನಿಯಮಿತ ಜಾಮೀನನ್ನು ಪಡೆಯಲು ಅರ್ಹನಿದ್ದಾನೆಯೇ?

2) ಏನು ಆದೇಶ?

6. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

ಅಂಶ 1)ಃ ಸಕಾರಾತ್ಮಕವಾಗಿ,
ಅಂಶ 2)ಃ ಅಂತಿಮ ಆದೇಶದಂತೆ, ಈ ಕೆಳಕಂಡಂತೆಃ

ಕಾ ರ ಣ ಗ ಳುಃ

7. ಅಂಶ 1)ಃ ಅರ್ಜಿದಾರ/ಆರೋಪಿತ, ತಾನು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ಕುಟುಂಬ ನಿರ್ವಹಣೆಯ ಜವಾಬ್ದಾರಿ ತನ್ನ ಮೇಲೆ ಇರುವುದರಿಂದ ತನ್ನನ್ನು ನಿಯಮಿತ ಜಾಮೀನಿನ ಮೇಲೆ ಬಿಡುಗಡೆಗೊಳಿಸ

ಬೇಕೆಂದು ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾನೆ. ಅರ್ಜಿದಾರ/ಆರೋಪಿತನ ಪರ ವಕೀಲರು, ಮೇಲ್ನೋಟಕ್ಕೆ ಅರ್ಜಿದಾರನ ವಿರುದ್ಧ ಯಾವುದೇ ಅಪಾದನೆಗಳು ಕಂಡು ಬರುತ್ತಿಲ್ಲವೆಂದೂ, ಆತ ಹಾಲಿ ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ನ್ಯಾಯಾಂಗ ಬಂಧನದಲ್ಲಿಯೇ ಮುಂದುವರೆಸಿದರೆ ಆತನ ಕುಟುಂಬಕ್ಕೆ ತುಂಬಲಾರದ ತೊಂದರೆಗಳು ಉಂಟಾಗುವ ಸಾಧ್ಯತೆಗಳಿವೆ ಎಂದೂ, ಹೀಗಾಗಿ ಆತನಿಗೆ ನಿಯಮಿತ ಜಾಮೀನು ಮಂಜೂರು ಮಾಡಬೇಕೆಂದು ವಾದಿಸಿದ್ದಾರೆ. ಅರ್ಜಿದಾರ/ಆರೋಪಿತನು ಪಿರ್ಯಾದಿದಾರರ ಕುತ್ತಿಗೆಗೆ ಚಾಕುವಿನಿಂದ ಹೊಡೆದು ತೀವ್ರ ಸ್ವರೂಪದ ರಕ್ತಗಾಯಗೊಳಿಸಿದ್ದು, ಅರ್ಜಿದಾರ/ಆರೋಪಿತನಿಗೆ ನಿಯಮಿತ ಜಾಮೀನು ಮಂಜೂರು ಮಾಡಿದಲ್ಲಿ ಆತ ಅಭಿಯೋಜನಾ ಪರ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಪುನಃ ಇಂತಹದೇ ಅಪರಾಧಗಳನ್ನು ಎಸಗುವ ಹಾಗೂ ಪರಾರಿಯಾಗುವ ಸಾಧ್ಯತೆಗಳಿರುವ ಕಾರಣ, ಅರ್ಜಿದಾರ/ಆರೋಪಿತನಿಗೆ ನಿಯಮಿತ ಜಾಮೀನು ಮಂಜೂರು ಮಾಡಬಾರದು ಎಂದು ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

8. ಪಿರ್ಯಾದುದಾರರು ದಿ:16-07-2019ರಂದು ಬೆಳಿಗ್ಗೆ ಸುಮಾರು 08-00ಗಂಟೆ ಸಮಯದಲ್ಲಿ ತಮ್ಮ ಮನೆಯಿಂದ ಹೊರಗೆ ಬಂದು ಅಪಾರ್ಟ್‌ಮೆಂಟ್ ಪಕ್ಕದಲ್ಲಿ ನಿಂತು ಆಟೋಗಾಗಿ ಕಾಯುತಿರುವಾಗ ಯಾರೋ ಇಬ್ಬರು ಅಪರಿಚಿತ ವ್ಯಕ್ತಿಗಳು ಬೈಕ್‌ನಲ್ಲಿ ಬಂದು ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ವ್ಯಕ್ತಿ ಚಾಕುವಿನಿಂದ ಪಿರ್ಯಾದಿಯ ಬಲ ಕುತ್ತಿಗೆಗೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಗೊಳಿಸಿದ್ದು, ನಂತರ ಸ್ಥಳೀಯರು ಆರ್.ಎಂ.ನಗರದ ಕೋಷಿಯಾನ್ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ

ಪಡೆದುಕೊಂಡು ಆರೋಪಿತರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ ಎನ್ನುವುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

9. ಈ ಪ್ರಕರಣಕ್ಕೆ ಸಂಬಂಧಪಟ್ಟ ಪಿರ್ಯಾದಿದಾರರ ದೂರನ್ನು ಗಮನಿಸಿದಾಗ ಅರ್ಜಿದಾರ/ಆರೋಪಿತ ಪಿರ್ಯಾದಿಯ ಬಲ ಕುತ್ತಿಗೆಗೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಗೊಳಿಸಿರುತ್ತಾನೆ ಎಂಬೆಲ್ಲಾ ಅಂಶಗಳು ಕೇವಲ ಸಾಕ್ಷ್ಯಾಧಾರಗಳಿಂದಲೇ ರುಜುವಾತಾಗಬೇಕಾಗಿರುವ ಸಂಗತಿಗಳಾಗಿವೆ ಮತ್ತು ಈ ಹಂತದಲ್ಲಿಯೇ ಅರ್ಜಿದಾರ/ಆರೋಪಿತ ಆರೋಪಿಸಿದಂತಹ ಅಪರಾದಗಳನ್ನು ಎಸಗಿದ್ದಾನೆ ಎಂಬ ಪೂರ್ವಭಾವನೆಯನ್ನು ತಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮೇಲಾಗಿ, ಆರೋಪಿಸಿದಂತಹ ಅಪರಾಧಗಳ್ಯಾವುವು ಕಡ್ಡಾಯವಾಗಿ ಮರಣದಂಡನೆ ಶಿಕ್ಷೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ. ಅಲ್ಲದೆ ಅರ್ಜಿದಾರ/ಆರೋಪಿತನು 'Intraductal Palpllary Mucinous Neoplasia of Pancreas Non-invasive' ಖಾಯಿಲೆಯಿಂದ ಬಳಲುತ್ತಿದ್ದು, ಆತನಿಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಅವಶ್ಯಕತೆ ಇರುತ್ತದೆ.

10. ಅರ್ಜಿದಾರ/ಆರೋಪಿತನ ವಿಳಾಸವನ್ನು ಗಮನಿಸಲಾಗಿ, ಆತ ತೆಲಂಗಾಣ ರಾಜ್ಯದ ಹೈದ್ರಾಬಾದ್ ನಗರದ ಖಾಯಂ ನಿವಾಸಿ ಎಂದು ಕಂಡು ಬರುತ್ತಿರುವುದರಿಂದ, ಸರ್ಕಾರಿ ಅಭಿಯೋಜಕರು ವ್ಯಕ್ತಪಡಿಸಿರುವ ಆತಂಕಗಳನ್ನು ಸೂಕ್ತ ಷರತ್ತುಗಳನ್ನು ವಿಧಿಸುವುದರೊಂದಿಗೆ ಆತನಿಗೆ ನಿಯಮಿತ ಜಾಮೀನು ನೀಡಬಹುದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು ಮೇಲಿನ ಅಂಶ ಒಂದನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

11. <u>ಅಂಶ 2)</u>ಃ ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಅರ್ಜಿದಾರ/ ಆರೋಪಿತನಾದ ಸತ್ಯಪ್ರಸಾದ್ ವೆಂಕಟರಂಗ ನುನಿ ಈತನ ಪರವಾಗಿ ಸಲ್ಲಿಸಿದ ನಿಯಮಿತ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಹೆಣ್ಣೂರು ಪೊಲೀಸ್ ಠಾಣೆಯ ಕ್ರೈಮ್ ನಂಬರ್ 209/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 326, 307 ಸಹವಾಚಕ ಕಲಂಃ34ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರ/ಆರೋಪಿತನಿಗೆ ನಿಯಮಿತ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರ/ಆರೋಪಿತ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ನೀಡತಕ್ಕದ್ದು,
2. ಅರ್ಜಿದಾರ/ಆರೋಪಿತ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,
3. ಅರ್ಜಿದಾರ/ಆರೋಪಿತ ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ತನ್ನ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ ಅನುಮತಿ ಪಡೆಯತಕ್ಕದ್ದು,

4. ಅರ್ಜಿದಾರ/ಆರೋಪಿತ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,
5. ಅರ್ಜಿದಾರ/ಆರೋಪಿತ ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 26ನೇ ಮಾಹೆ ಜೂನ್, 2020ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ)*

*(ಬಾಬಾಸಾಹೇಬ್ ಎಲ್. ಜಿನರಾಳ್ಕರ್),*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಅರ್ಜಿದಾರ/ ಆರೋಪಿತನಾದ ಸತ್ಯಪ್ರಸಾದ್ ವೆಂಕಟರಂಗ ನುನಿ ಈತನ ಪರವಾಗಿ ಸಲ್ಲಿಸಿದ ನಿಯಮಿತ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಹೆಣ್ಣೂರು ಪೊಲೀಸ್ ಠಾಣೆಯ ಕ್ರೈಮ್ ನಂಬರ್ 209/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 326, 307 ಸಹವಾಚಕ ಕಲಂಃ34ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರ/ಆರೋಪಿತನಿಗೆ ನಿಯಮಿತ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರ/ಆರೋಪಿತ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ನೀಡತಕ್ಕದ್ದು,
2. ಅರ್ಜಿದಾರ/ಆರೋಪಿತ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,

3. ಅರ್ಜಿದಾರ/ಆರೋಪಿತ ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ತನ್ನ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ ಅನುಮತಿ ಪಡೆಯತಕ್ಕದ್ದು,
4. ಅರ್ಜಿದಾರ/ಆರೋಪಿತ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,
5. ಅರ್ಜಿದಾರ/ಆರೋಪಿತ ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು.

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*